ಧಾರ್ಮಿಕ ತತ್ತ್ವ ಮತ್ತು ತತ್ತ್ವಶಾಸ್ತ್ರೀಯ ಸಿದ್ಧಾಂತಗಳ ರೂಪದಲ್ಲಿ ಸ್ಥಾಪಿತವಾಯಿತು. ಈ ಧರ್ಮಸಮನ್ವಯವಾದದ ಮೂಲಭೂತ ತತ್ತ್ವಗಳು ಹೀಗಿವೆ:

**೧. ಪ್ರತಿಯೊಂದು ಧರ್ಮವೂ ಮೂಲಭೂತವಾಗಿ ಆತ್ಯಂತಿಕ ಸತ್ಯವನ್ನು ತಲುಪುವ ಮಾರ್ಗವಾಗಿದೆ.**

**೨. ಆತ್ಯಂತಿಕ ಸತ್ಯವೆಂಬುದು ಒಂದೇ; ಆದರೆ ಅದು ಹಲವು ಹೆಸರುಗಳಿಂದ ಕರೆಯಲ್ಪಡುತ್ತದೆ.**

**೩. ಆತ್ಯಂತಿಕ ಸತ್ಯವನ್ನು ಹಲವು ಮಾರ್ಗಗಳ ಮೂಲಕ ಸಾಕ್ಷಾತ್ಕರಿಸಿಕೊಳ್ಳಬಹುದು.**

**೪. ಪ್ರಪಂಚದ ಎಲ್ಲ ಧರ್ಮಗಳೂ ಸತ್ಯ; ಏಕೆಂದರೆ ಅವು ಆತ್ಯಂತಿಕ ಸತ್ಯದ ಸಾಕ್ಷಾತ್ಕಾರದ ಕಡೆಗೆ ನಮ್ಮನ್ನು ಒಯ್ಯುತ್ತವೆ.**

ಈ ನಾಲ್ಕು ಅಂಶಗಳು ಪ್ರಪಂಚದ ಧರ್ಮಗಳ ನಡುವೆ ಸಮನ್ವಯವನ್ನು ಉಂಟುಮಾಡಲು ಬೇಕಾದ ಕನಿಷ್ಠ ಆವಶ್ಯಕತೆಗಳಾಗಿವೆ ಎಂದು ನಾನು ಭಾವಿಸುತ್ತೇನೆ.

"ಎಲ್ಲಿ ಅತ್ಯುನ್ನತ ಸತ್ಯಗಳು ಪ್ರಾಯೋಗಿಕವಾಗುವವೋ ಆ ಸಮಾಜವು ಅತ್ಯಂತ ಶ್ರೇಷ್ಠವಾದುದು" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ನಾವು ವೈವಿಧ್ಯಮಯವಾದ ಸಮಾಜದಲ್ಲಿ ಇಂದು ಬದುಕುತ್ತಿದ್ದೇವೆ. ಆದ್ದರಿಂದ 'ವೈವಿಧ್ಯತೆ' ಎನ್ನುವುದು ವಾಸ್ತವಿಕ ಸತ್ಯ ಎನ್ನುವುದನ್ನು ನಾವು ಗುರುತಿಸಬೇಕಿದೆ. Pluralism ಎಂಬ ಪದದ 'P' ಎಂಬ ಅಕ್ಷರವು positive ಅಥವಾ ಸಕಾರಾತ್ಮಕ ದೃಷ್ಟಿಕೋನ ಎಂಬ ಅರ್ಥವನ್ನು ಕೊಡುತ್ತದೆ. ನಮ್ಮ ಉದ್ದೇಶ ಕೇವಲ ತಾತ್ತ್ವಿಕ ವಿಷಯಗಳಲ್ಲಿ ಮಾತ್ರವೇ ಒಪ್ಪಂದವಲ್ಲ, ಇತರರು ತಮ್ಮ ಮಾರ್ಗಗಳನ್ನು ಅನುಸರಿಸಲು ತೊಂದರೆಯಾಗದ ರೀತಿಯಲ್ಲಿ ಸಮಾಜದಲ್ಲಿ ಪ್ರತಿಯೊಬ್ಬನೂ, ತನ್ನದೇ ಆದ ಮಾರ್ಗವನ್ನು ಅನುಸರಿಸಬೇಕು.

ಧರ್ಮಗಳ ನಡುವಣ ಸಂವಾದ ಈ ತಿಳಿವಳಿಕೆಯನ್ನು ಉಂಟುಮಾಡಲು ಮಾರ್ಗದರ್ಶನ ನೀಡಬೇಕು. ಇದು ಕೇವಲ ವಿದ್ಯಾವಂತರ ಅಥವಾ ಉನ್ನತ ವರ್ಗದ ಜನರಲ್ಲಿ ಮಾತ್ರವಲ್ಲ; ಬಡವರು, ಅನಕ್ಷರಸ್ಥರು ಮುಂತಾದ ಜನಸಾಮಾನ್ಯರ ನಡುವೆ ಕೂಡ ಸಾಧ್ಯವಾಗಬೇಕು. ಈ ಜನ ಶಾಂತಿ ನೆಮ್ಮದಿಯಿಂದ ಒಟ್ಟಾಗಿ ಬಾಳುತ್ತ, ತಮ್ಮ ತಮ್ಮ ಧರ್ಮವನ್ನು ನಿಷ್ಠೆಯಿಂದ ಆಚರಿಸುವಂತಾಗಬೇಕು.

ಈ ಅಂತರಧಾರ್ಮಿಕ ಸಮ್ಮೇಳನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಏರ್ಪಡಿಸಿದ ಸಿವಾಸ್ ನಗರದ **ಕಮ್‌ಹುರಿಯೆತ್ ವಿಶ್ವವಿದ್ಯಾನಿಲಯ**ವನ್ನು ಅಭಿನಂದಿಸುತ್ತೇನೆ. ಜಾಗತೀಕರಣದ ಈ ಯುಗದಲ್ಲಿ ಇಂಥ ಸಮ್ಮೇಳನಗಳು ವಿಶ್ವಧರ್ಮಗಳ ನಡುವೆ ಮುಕ್ತ ಹಾಗೂ ವಿಶಾಲ ತಿಳಿವಳಿಕೆಯನ್ನು ಉಂಟು ಮಾಡಲು ಸಹಾಯಕವಾಗುತ್ತವೆ. ಆ ಮೂಲಕ ಜಗತ್ತಿನಾದ್ಯಂತ ಶಾಂತಿಯನ್ನು ಸ್ಥಾಪಿಸುವ ಹಾದಿಯನ್ನು ನಾವು ಸುಗಮಗೊಳಿಸಬಹುದು.

ಈ ಗುರಿಯತ್ತ ಸಾಗಲು ನಾವೆಲ್ಲರೂ ಕಾರ್ಯತತ್ಪರರಾಗಲು ನಿರ್ಧರಿಸೋಣ. ಶಾಂತಿ, ನೆಮ್ಮದಿ, ಸತ್ಯಗಳ ಕಡೆಗಿನ ನಮ್ಮ ಪಯಣದಲ್ಲಿ ನಮಗೆ ದಾರಿ ತೋರಿಸೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ. ನಿಮಗೆಲ್ಲರಿಗೂ ಕೃತಜ್ಞತೆಗಳು. ★


**೨೦೦೯ ರ ಅಕ್ಟೋಬರ್ ತಿಂಗಳಿನಲ್ಲಿ ಕೊಲ್ಕತಾದಲ್ಲಿ ದಕ್ಷಿಣ ಏಷಿಯಾದ ಪ್ರಮುಖ ಕ್ರೈಸ್ತ ಧಾರ್ಮಿಕ ಮುಖಂಡರ ವಾರ್ಷಿಕ ಅಧಿವೇಶನ ನಡೆಯಿತು. ಈ ಸಂದರ್ಭದಲ್ಲಿ ಎಲ್ಲರೂ ಅಚ್ಚರಿಪಡುವಂಥ ಘಟನೆಯೊಂದು ಜರುಗಿತು. ೨೦೦೯, ಅಕ್ಟೋಬರ್ ೨೯ ರಂದು ಆ ಎಲ್ಲ ಕ್ರೈಸ್ತಪಾದ್ರಿಗಳೂ ಕೊಲ್ಕತಾಕ್ಕೆ ಹತ್ತಿರವಿರುವ, ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರವಾದ ಬೇಲೂರು ಮಠಕ್ಕೆ ಹೋದರು. ಅಲ್ಲಿ ಪ್ರಾರ್ಥನಾ ಸಭೆಯೊಂದನ್ನು ನಡೆಸಿದರು.**

**ಒಬ್ಬರು ಅವರನ್ನು ದೇವಾಲಯಕ್ಕೆ ಹೋಗಿ ಪ್ರಾರ್ಥನೆ ಸಲ್ಲಿಸಿದುದಕ್ಕೆ ಪ್ರೇರೇಪಣೆ ಎಲ್ಲಿಂದ ದೊರೆಯಿತು ಎಂದು ಕೇಳಿದರು. ಅದಕ್ಕೆ ಆ ಪಾದ್ರಿಗಳ ಮುಖಂಡರಾದ ಫಾದರ್ ಜಾರ್ಜ್ ಪಟ್ಟೇರಿ ಅವರು ಹೀಗೆ ನುಡಿದರು: "ಪಶ್ಚಿಮ ಬಂಗಾಳದಲ್ಲಿ ಎರಡು ಸಾಂಸ್ಕೃತಿಕ–ಆಧ್ಯಾತ್ಮಿಕ ಆಕರ್ಷಣಾ ಕೇಂದ್ರಗಳಿವೆ. ಒಂದು ಮದರ್ ಥೆರೇಸಾ ಅವರ ಸೇವಾಕೇಂದ್ರ ಮತ್ತು ಇನ್ನೊಂದು ರಾಮಕೃಷ್ಣ ಮಿಷನ್. ಆದ್ದರಿಂದ ನಾವು ಮದರ್ ಥೆರೇಸಾ ಅವರ ಸಮಾಧಿಯ ಮುಂದೆ ಪ್ರಾತಃಕಾಲದ ಪ್ರಾರ್ಥನಾಸಭೆಯನ್ನು ನಡೆಸಿದೆವು. ನಂತರ ಹೂಗ್ಲಿ ನದಿಯುದ್ದಕ್ಕೂ ಪ್ರಯಾಣ ಮಾಡಿ, ಈ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಿದೆವು. ಇದು ವಿಶ್ವಾತ್ಮಕ ಪ್ರಾರ್ಥನೆಯಾಗಿದ್ದು, ಇಡೀ ಜಗತ್ತು ಮತ್ತು ಪಶ್ಚಿಮ ಬಂಗಾಳದ ಜನರ ಕಲ್ಯಾಣಕ್ಕಾಗಿ ಮುಡಿಪಾಗಿತ್ತು. ಶ್ರೀರಾಮಕೃಷ್ಣರು ತಾವು ಏಸುಕ್ರಿಸ್ತನ ದರ್ಶನವನ್ನು ಪಡೆದರೆಂದು ಘೋಷಿಸಿಕೊಂಡಿದ್ದಾರೆ. ಹೀಗಾಗಿ ಅವರ ಅನುಯಾಯಿಗಳು ಶ್ರೀರಾಮಕೃಷ್ಣರ ಸ್ವಂತ ಅನುಭವಗಳಲ್ಲಿ ಏಸುಕ್ರಿಸ್ತನು ಒಬ್ಬ ಮಹತ್ವದ ಆಧ್ಯಾತ್ಮಿಕ ಪ್ರತೀಕವೆಂದು ನಂಬಿದ್ದಾರೆ. ಹಾಗೆಯೇ ಅವರು ಕ್ರೈಸ್ತ ಸಂನ್ಯಾಸಿಗಳನ್ನು ಮತ್ತು ಕ್ರೈಸ್ತ ಸಂನ್ಯಾಸಿ ಪಂಗಡಗಳನ್ನು, ಅದರಲ್ಲೂ ನಮ್ಮ ಚರ್ಚನ್ನು, ಬಹಳ ಗೌರವದಿಂದ ಕಾಣುತ್ತಾರೆ. ಹೀಗಾಗಿ ನಮ್ಮ ಕಡೆಯಿಂದ ಅವರ ಜೊತೆಗೆ ನಿರಂತರವಾಗಿ ಸಂವಾದವನ್ನು ನಡೆಸುವುದು ಅತ್ಯಂತ ಅವಶ್ಯವೆಂದು ಭಾವಿಸಿದ್ದೇನೆ. ಏಕೆಂದರೆ ಈ ಬೇಲೂರು ಮಠವು ಒಂದು ಆರಾಧನಾ ಸ್ಥಳವಾಗಿದೆ; ಸಾವಿರಾರು ಜನರು ಪ್ರತಿದಿನವೂ ಇಲ್ಲಿಗೆ ಪ್ರಾರ್ಥನೆ ಸಲ್ಲಿಸಲು ಮತ್ತು ಆಧ್ಯಾತ್ಮಿಕ ಅನುಭವವನ್ನು ಪಡೆಯಲು ಬರುತ್ತಾರೆ. ಆದ್ದರಿಂದ ಈ ಭಾವನೆಯನ್ನು ಮತ್ತು ಭಗವಂತನ ಪೂಜಾವಿಧಾನದ ಈ ಆಯಾಮವನ್ನು ನಾವು ಗೌರವಿಸಬೇಕು. ಭಗವದ್ಭಕ್ತರೂ ಹಾಗೂ ಉಪದೇಶಕರೂ ಆದ ನಮಗೆ ಏಸುಕ್ರಿಸ್ತನಲ್ಲಿ ನಿವೇದಿಸಿಕೊಳ್ಳುವುದು ಮತ್ತು ಇತರೆ ಪಂಗಡಗಳಿಗೆ ಸೇರಿದ ಈ ಬಗೆಯ ಜನರೊಡನೆ ಸಂಪರ್ಕ ಇಟ್ಟುಕೊಳ್ಳುವುದು ಸಹಜವಾಗಿಯೆ ಬಂದಿರುವ ಗುಣವಾಗಿದೆ. ಪರಸ್ಪರ ಗೌರವಾದರಗಳು ಇರಬೇಕೆಂದು ನಾನು ಬಯಸುತ್ತೇನೆ. ನಾವು ಇತರರ ಪೂಜಾವಿಧಾನವನ್ನು ಗೌರವದಿಂದ ಕಾಣಬೇಕು; ಒಟ್ಟಾಗಿ ಪ್ರಾರ್ಥನೆ ಮಾಡುವ ಸಾಮಾನ್ಯ ವಿಧಾನಗಳನ್ನು ಕೂಡ ಕಂಡುಕೊಳ್ಳಬೇಕು. ಒಬ್ಬನೇ ಆದ ಪರಮಾತ್ಮನಲ್ಲಿ ನಮ್ಮ ನಂಬಿಕೆಯನ್ನು ಘೋಷಿಸಿಕೊಳ್ಳಲು, ಪರಸ್ಪರ ಗೌರವಿಸುವುದು, ಆದರಿಸುವುದು ಮತ್ತು ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದು ಬಹಳ ಮುಖ್ಯವಾದುದೆಂದು ನಾನು ಭಾವಿಸುತ್ತೇನೆ."**

**(ಆಧಾರ: 'ಸತ್ಯದೀಪಂ' – ಕೇರಳದಿಂದ ಪ್ರಕಟವಾಗುವ ಕ್ಯಾಥೊಲಿಕ್ ಪತ್ರಿಕೆ)**

# ಪರಿಪೂರ್ಣ ಭಕ್ತರಾಗಿ ಸ್ವಾಮಿ ವಿವೇಕಾನಂದರು

ಸ್ವಾಮಿ ಭಜನಾನಂದ



ಬೇಲೂರು ಮಠದಲ್ಲಿರುವ ಸ್ವಾಮಿ ವಿವೇಕಾನಂದರ ಮಂದಿರ

ಸ್ವಾಮಿ ವಿವೇಕಾನಂದರು ಅರಿವಿನ ಕಿರಣಗಳನ್ನು ಹೊರಸೂಸುತ್ತಿದ್ದ ಜ್ಞಾನಸೂರ್ಯರೆಂದೇ ಪ್ರಖ್ಯಾತರಾಗಿದ್ದಾರೆ. ಆದರೆ ಅವರ ಅಂತರಂಗವು ಭಕ್ತಿಗಂಗೆಯಿಂದ ತುಂಬಿಹೋಗಿತ್ತು ಹಾಗೂ ಅದು ಯಾವ ತಾತ್ತ್ವಿಕ ಅಭಿಪ್ರಾಯಗಳ ಕಟ್ಟಿಗೆ ಒಳಪಡದೆ, ವಿಶ್ವತೋಮುಖವಾಗಿತ್ತು. ಇದನ್ನು ಅವರ ಭಾಷಣಗಳ ವಿದ್ವತ್ಪೂರ್ಣ ಹಾಗೂ ಪ್ರಬುದ್ಧ ವಿಶ್ಲೇಷಣೆ ಮತ್ತು ವಿವರಣೆಗಳ ಮೂಲಕ ನಮಗೆ ಮನದಟ್ಟು ಮಾಡಿಕೊಟ್ಟಿರುವ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಸಹಾಯಕ ಕಾರ್ಯದರ್ಶಿಗಳಲ್ಲಿ ಒಬ್ಬರು. ತಮ್ಮ ಗಾಢ ಅನುಭಾವ ದೃಷ್ಟಿ ಮತ್ತು ಅಪಾರ ಪಾಂಡಿತ್ಯಗಳಿಗೆ ಹೆಸರಾಗಿರುವ ಪೂಜ್ಯ ಸ್ವಾಮೀಜಿಯವರ ಹಲವಾರು ಲೇಖನಗಳು ಈಗಾಗಲೇ 'ವಿವೇಕಪ್ರಭ' ಪತ್ರಿಕೆಯಲ್ಲಿ ಪ್ರಕಟವಾಗಿವೆ. 'ವೇದಾಂತ ಕೇಸರಿ' ಆಂಗ್ಲ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನದ ಅನುವಾದ ಇದು.
ಅನುವಾದ : ಸಂ.

ಶ್ರೀರಾಮಕೃಷ್ಣರ ಜೀವನದ ಅಂತಿಮ ಘಟ್ಟ ಅದು. ಒಂದು ದಿನ ಶ್ರೀರಾಮಕೃಷ್ಣರು ತಮ್ಮ ಹತ್ತಿರ ಕುಳಿತಿದ್ದ ನರೇಂದ್ರನ ಮುಖವನ್ನು ವಾತ್ಸಲ್ಯದಿಂದ ಸವರಿದರು. "ನಿನ್ನ ಮುಖ ಮತ್ತು ಅಂಗಾಂಗಗಳು ನೀನೊಬ್ಬ ಭಕ್ತ ಎನ್ನುವುದನ್ನು ತೋರಿಸುತ್ತವೆ. ಜ್ಞಾನಿಯಾದವನಿಗೆ ಬೇರೆಯದೇ ಆದ ಲಕ್ಷಣಗಳಿರುತ್ತವಷ್ಟೆ. ಅವುಗಳು ಬರಡಾಗಿರುತ್ತವೆ" ಎಂದು ನುಡಿದರು. 'ಶ್ರೀರಾಮಕೃಷ್ಣ ವಚನವೇದ' ದ ಕರ್ತೃವಾದ ಮಹೇಂದ್ರನಾಥ ಗುಪ್ತನು, ತಾನು ದಕ್ಷಿಣೇಶ್ವರದ ಕಾಳೀ ದೇಗುಲದಲ್ಲಿ ನೋಡಿದ, ಯುವಕ ನರೇಂದ್ರನ ಬಗ್ಗೆ ತನ್ನ ನೆನಪುಗಳನ್ನು ಹೀಗೆ ಬರೆದಿಟ್ಟಿದ್ದಾನೆ: "ಅವನ ಕಣ್ಣುಗಳು ಪ್ರಜ್ವಲವಾಗಿದ್ದವು. ಅವನ ಮಾತುಗಳು ಚೈತನ್ಯದಿಂದ ಕೂಡಿದ್ದವು. ಅವನಲ್ಲಿ ಭಗವದ್ಭಕ್ತನ ಲಕ್ಷಣವಿತ್ತು." ಸ್ವಾಮಿ ವಿವೇಕಾನಂದರೇ ಒಮ್ಮೆ ತಮ್ಮ ಒಬ್ಬ ಶಿಷ್ಯನಿಗೆ ಹೀಗೆ ಹೇಳಿದರು: "ನಾನು ಹೊರಗಡೆ ಜ್ಞಾನದಿಂದ ತುಂಬಿದ್ದೇನೆ; ಆದರೆ ಒಳಗಡೆ ಇರುವುದು ಪೂರ್ತಿ ಭಕ್ತಿ ಮಾತ್ರ."

ಶ್ರೀರಾಮಕೃಷ್ಣರ ದೋಷಮುಕ್ತ ಅನುಭೂತಿ, ಮಾಸ್ಟರ್ ಮಹಾಶಯನ ಮನಸ್ಸಿನ ಮೇಲಾದ ಮೊದಲ ಛಾಪು ಹಾಗೂ ಸ್ವಾಮೀಜಿ ಸ್ವತಃ ತಾವೇ ಒಪ್ಪಿಕೊಂಡದ್ದು – ಇವೆಲ್ಲವೂ ಭಕ್ತಿ ಅಥವಾ ಭಗವತ್ಪ್ರೇಮವೆಂಬುದು ಸ್ವಾಮಿ ವಿವೇಕಾನಂದರ ವ್ಯಕ್ತಿತ್ವದ ಮೇರು ಅಂಶ ಎನ್ನುವುದನ್ನು ಸಾಬೀತುಪಡಿಸುತ್ತವೆ. ಅಥವಾ ಅದು ಅವರ ಒಂದು ಪ್ರಮುಖವಾದ ಗುಣವಾದರೂ ಆಗಿದೆ ಎಂಬುದನ್ನು ತೋರಿಸುತ್ತದೆ. ಈ ಮನೋಭಾವವನ್ನು ಅವರ ಬಾಲ್ಯದಲ್ಲಿಯೂ ಕಾಣಬಹುದಾಗಿತ್ತು. ಅವರು ಆಗ ದೇವದೇವಿಯರ ವಿಗ್ರಹಗಳನ್ನು ಪೂಜಿಸುತ್ತಿದ್ದರು. ಈ ಆಳವಾದ ಮತ್ತು ಅಂತರ್ಗತವಾದ ಭಗವತ್ಪ್ರೇಮವು ಹದಿಹರಯದಲ್ಲಿ ಅವರನ್ನು ಬ್ರಾಹ್ಮಸಮಾಜಕ್ಕೆ ಸೇರಲು ಪ್ರೇರೇಪಿಸಿತು; ಶ್ರೀರಾಮಕೃಷ್ಣರಲ್ಲಿಗೆ ಕರೆದೊಯ್ದಿತು; ಕಡೆಗೆ ಮಾನವನಲ್ಲಿರುವ ಭಗವಂತನ ಸೇವೆಯಲ್ಲಿ ತಮ್ಮ ಪ್ರಾಣ ಹೋಗುವವರೆಗೂ, ಅಗಾಧ ಪರಿಶ್ರಮದ ಕಾರ್ಯದಲ್ಲಿ ತೊಡಗುವಂತೆ ಮಾಡಿತು.

ಅವರು ಪಶ್ಚಿಮ ದೇಶಗಳಿಂದ ಮರಳಿಬಂದಾಗ, ಜಯದೇವನ **ಗೀತಗೋವಿಂದ** ಮೊದಲಾದ ಭಕ್ತಿಗೀತೆಗಳನ್ನು ಮೃದುವಾಗಿ ಯಾವಾಗಲೂ ಹಾಡಿಕೊಳ್ಳುತ್ತಿದುದನ್ನು ನೋಡಬಹುದಿತ್ತು. ಅವರಲ್ಲಿ ಸುಪ್ತವಾಗಿದ್ದ ಭಕ್ತಿಕಾರಂಜಿಯು ಒಮ್ಮೊಮ್ಮೆ ಜ್ಞಾನದ ಹೊದಿಕೆಯನ್ನು ಕಳಚಿ, ಹೊರಚಿಮ್ಮಿ, ಅವರನ್ನು ಗಾಢ ಆಧ್ಯಾತ್ಮಿಕ ಭಾವದಲ್ಲಿ ಮುಳುಗಿಸಿಬಿಡುತ್ತಿತ್ತು. ಅವರು ಅಮರನಾಥ,

ಕ್ಷೀರಭವಾನಿ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದಾಗ ಆಗಿದ್ದು ಇದೇ. ಅವರು ತಮ್ಮ ಭಕ್ತಿಯುತ ಉನ್ಮಾದವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಸದಾ ಪ್ರಯತ್ನಿಸುತ್ತಿದ್ದರು. ಇಲ್ಲದಿದ್ದರೆ, ಅವರ ಆತ್ಮವು ಪರಮಾತ್ಮನೆಡೆಗೆ ಹಾರಿಬಿಡುತ್ತಿತ್ತು. 'ಏಕವಾದದ್ದು ಏಕವಾಗಿರುವುದರೆಡೆಗೆ ಹಾರಿಹೋಗುವ' ಪರಿ ಅದಾಗಿತ್ತು.

ಭಕ್ತಿಭಾವವು ಅವರ ವ್ಯಕ್ತಿತ್ವದ ತುಂಬೆಲ್ಲ ಓತಪ್ರೋತವಾಗಿ ತುಂಬಿಬಿಟ್ಟಿತ್ತು. 'ಜೀವನ' ಮತ್ತು 'ಸತ್ಯತತ್ತ್ವ'ದ ಬಗೆಗಿನ ಅವರ ಚಿಂತನೆ ಮತ್ತು ಭಾಷಣಗಳನ್ನು ರಂಜಿಸಿಬಿಟ್ಟಿತ್ತು. ಹೀಗಾಗಿ ನಮ್ಮ ಅಧ್ಯಯನ ಅವರ 'ಭಕ್ತಿಯೋಗ' ಪ್ರವಚನಗಳಿಗೆ ಮಾತ್ರವೇ ಸೀಮಿತಗೊಳ್ಳಲು ಸಾಧ್ಯವಿಲ್ಲ. ಅವರ ಕೃತಿಶ್ರೇಣಿಯ ಉದ್ದಗಲಕ್ಕೂ ಅದು ವಿಸ್ತಾರಗೊಳ್ಳಬೇಕು. ಇಲ್ಲಿ ಇನ್ನೊಂದು ಕಷ್ಟವಿದೆ. ಸ್ವಾಮೀಜಿಯವರದು ವಿವಿಧ ಆಯಾಮಗಳ ಜ್ಯೋತಿ–ರ್ಮಯ ವ್ಯಕ್ತಿತ್ವವಾಗಿತ್ತು. ಅವರು ವಿವಿಧ ಆಧ್ಯಾತ್ಮಿಕ ಭಾವಗಳಲ್ಲಿ ತನ್ಮಯತೆಯನ್ನು ಪಡೆಯುವ ಅಪೂರ್ವ ಸಾಮರ್ಥ್ಯ ಉಳ್ಳವರಾಗಿದ್ದರು. ಅವರ ಕೃತಿಗಳನ್ನು ಮೇಲುನೋಟಕ್ಕೆ ಓದು ವವರಿಗೆ ಇದು ವಿಸ್ಮಯವನ್ನು ಉಂಟುಮಾಡುತ್ತದೆ. ಹಾಗೆಯೇ ಅದು ಅವರ ಜೀವನ ಮತ್ತು ಸಂದೇಶಗಳನ್ನು ಬಗೆಬಗೆಯಾಗಿ ವಿವರಿಸುವುದಕ್ಕೆ ಎಡೆಮಾಡಿಕೊಡುತ್ತದೆ.

ಇಷ್ಟಾದರೂ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯು ಕೆಲವು ವಿಶಿಷ್ಟತೆಗಳನ್ನು ತೋರ್ಪಡಿಸುತ್ತದೆ. ಅವು ಹೀಗಿವೆ:

೧. ಅವರ ಕೃತಿಗಳೆಲ್ಲದರಲ್ಲೂ ಅವರ ವೈಯಕ್ತಿಕ ಸಾಕ್ಷಾತ್ಕಾರದ ಅಚ್ಚಳಿಯದ ಮುದ್ರೆ ಇರುವುದನ್ನು ನೋಡಬಹುದು. ಇದು ಅವರು ಮಾತನಾಡಿದ ಮತ್ತು ಬರೆದ ಎಲ್ಲ ವಿಚಾರಗಳಿಗೂ ಒಂದು ವಿಶಿಷ್ಟ ಛಾಪನ್ನು ಮೂಡಿಸಿದೆ ಹಾಗೂ ಅಧಿಕೃತತೆಯನ್ನು ತಂದುಕೊಟ್ಟಿದೆ.

೨. ಸ್ವಾಮಿ ವಿವೇಕಾನಂದರು ಸಮನ್ವತೆಯ ಮೇಧಾವಿ. ಅವರು, ಪ್ರಾಚೀನ ಮತ್ತು ಆಧುನಿಕ, ಪೂರ್ವ ಮತ್ತು ಪಶ್ಚಿಮ – ಹೀಗೆ ವಿವಿಧ ಬಗೆಯ ಚಿಂತನೆಗಳನ್ನು ಸಮನ್ವಯಗೊಳಿಸುವ ವಿಶಿಷ್ಟ ಸಾಮರ್ಥ್ಯವನ್ನು ಹೊಂದಿದ್ದರು. ಅವರ ಈ ಸಮಗ್ರ ವಿಧಾನವು ಯೋಗಸಮನ್ವಯ ತತ್ತ್ವಕ್ಕೆ ಮಾತ್ರವೇ ಸೀಮಿತವಾಗಿ ಕಂಡುಬರುವುದಿಲ್ಲ, ಪ್ರತಿಯೊಂದು ಯೋಗದ ಸಂದರ್ಭದಲ್ಲಿ ಅವರು ಮಾಡುವ ವಿಶ್ಲೇಷಣೆಯಲ್ಲೂ ಅದು ಕಾಣಸಿಗುತ್ತದೆ. ಅವರ ಭಕ್ತಿಯೋಗ, ರಾಜಯೋಗ, ಜ್ಞಾನಯೋಗ ಮತ್ತು ಕರ್ಮಯೋಗಗಳ ಮೇಲಿನ ಪ್ರವಚನಗಳಲ್ಲಿ ಅವರೆಂದೂ ಸವಕಲು ಸಾಂಪ್ರದಾಯಿಕ ಮಾರ್ಗದಲ್ಲಿ ಮಾತ್ರ ನಿಂತುಬಿಡಲಿಲ್ಲ. ಅದಕ್ಕೆ ಬದಲಾಗಿ, ತತ್ತ್ವಶಾಸ್ತ್ರದ ಇತರ ಶಾಖೆಗಳ ಭಾವನೆಗಳನ್ನೂ ಸದಾ ತಮ್ಮ ವಿಷಯದ ಪರಿಧಿಯ ಒಳಕ್ಕೆ ತಂದುಕೊಳ್ಳುತ್ತಿದ್ದರು.

೩. ಸ್ವಾಮೀಜಿ ಧಾರ್ಮಿಕ ಭಾವನೆಗಳು ಮತ್ತು ಆದರ್ಶಗಳಿಗೆ ಅನುಷ್ಠಾನದ ತಿರುವನ್ನು ನೀಡಿದರು. ಶತಶತಮಾನಗಳಿಂದ ತತ್ತ್ವಜ್ಞರು ಮತ್ತು ಅನುಭಾವಿಗಳ ಪಾಲಿಗೆ ವಿವಾದಾಸ್ಪದವಾಗಿದ್ದ ಸಿದ್ಧಾಂತಗಳು ಅವರ ಕೈಯಲ್ಲಿ, ಸಾಮಾನ್ಯ ಸ್ತ್ರೀಪುರುಷರ ಮನಸ್ಸುಗಳನ್ನು ಉದ್ದೀಪನಗೊಳಿಸುವ ಮಹಾನ್ ಶಕ್ತಿಯನ್ನು ಪಡೆದುಕೊಂಡವು. ಅಜ್ಞಾತ ಪ್ರಾಚೀನಕಾಲದ ಅಸಂಬದ್ಧ ಛಾಯೆಗಳ ಹಾಗೆ ಉಳಿದುಕೊಂಡಿದ್ದ ಚಿಂತನಾಲಹರಿಗಳು ಅಸಂಖ್ಯ ಜನಸಮೂಹದ ಏಕೀಕೃತ ಕಾರ್ಯಪ್ರಣಾಳಿಗಳಾಗಿ ಪ್ರಜ್ವಲಿಸಿದವು. ಆದರೆ ಇದರಿಂದ ಸ್ವಾಮಿ ವಿವೇಕಾನಂದರು, ಆಧುನಿಕ ಮಾನವನಿಗೆ ಅವಶ್ಯವಾದ ನೂತನ ಧರ್ಮ ಅಥವಾ ತತ್ತ್ವಶಾಸ್ತ್ರದ ಪ್ರವರ್ತಕರಾದ ಪ್ರತಿಗಾಮಿ ಎಂದಾಗಲಿ, ಬಂಡಾಯ ಗಾರರೆಂದಾಗಲಿ ಅರ್ಥವಲ್ಲ. ಈ ಅಂಶವೇ ನಮ್ಮನ್ನು ನಾಲ್ಕನೆಯ ವಿಶಿಷ್ಟತೆಗೆ ಕರೆದುಕೊಂಡು ಹೋಗುವುದು.

೪. ಸ್ವಾಮಿ ವಿವೇಕಾನಂದರು ಶಾಸ್ತ್ರಗಳಿಗೆ ಮತ್ತು ಆರೋಗ್ಯಕರ ಧಾರ್ಮಿಕ ಪದ್ಧತಿಗಳಿಗೆ ಅಪಾರ ಗೌರವ ತೋರುತ್ತಿದ್ದರು. ಆಧುನಿಕಪ್ರಜ್ಞೆ ಉಳ್ಳವರಾಗಿದ್ದರೂ ಎಂದಿಗೂ, ಬಹಳ ಕಾಲದಿಂದ ಆಚರಣೆಯಲ್ಲಿರುವ ಆಧ್ಯಾತ್ಮಿಕ ಪಥಗಳಿಂದ ದೂರಸರಿಯಲಿಲ್ಲ. ಅದಲ್ಲದ, ಶ್ರುತಿ ಶಾಸ್ತ್ರಗಳಿಗೆ ವಿರುದ್ಧವಾಗಿರುವ ಕೆಲವು ದರ್ಶನಗಳು ತಮಗೆ ಆಗಿವೆ ಎಂದು ಎಂದೂ ಅವರು ಹೇಳಿಕೊಳ್ಳಲಿಲ್ಲ. ಹೀಗೆ ನೋಡಿದಾಗ, ಅವರು ಹಿಂದೂ ಆಚಾರ್ಯರ ಜ್ಯೇಷ್ಠ ಸಂಪ್ರದಾಯಕ್ಕೆ ಸೇರಿದ್ದಾರೆ. ಆ ಆಚಾರ್ಯರು ತಮ್ಮ ವೈಯಕ್ತಿಕ ಅನುಭವಗಳನ್ನು ಮತ್ತು ಅಭಿಪ್ರಾಯಗಳನ್ನು ವೇದಾಂತದ ಚೌಕಟ್ಟಿನೊಳಗೆ ಮಾತ್ರವೇ ವಿವರಿಸಲು ಮತ್ತು ಪ್ರತಿಪಾದಿಸಲು ಪ್ರಯತ್ನಿಸಿದರು. ಸ್ವಾಮಿ ವಿವೇಕಾನಂದರು ತಮ್ಮ ಸ್ವಂತ ದರ್ಶನಗಳು ಮತ್ತು ಅನುಭೂತಿ ಗಳಿಂದ ಮಾತ್ರವೇ ಮಾರ್ಗದರ್ಶನ ಪಡೆಯುತ್ತಿದ್ದರು. ವೈವಿಧ್ಯ ಮಯ ಚಿಂತನಾವಿಧಾನಗಳನ್ನು ತಮ್ಮ ತತ್ತ್ವಜಿಜ್ಞಾಸೆಯಲ್ಲಿ ಹೆಣೆಯಲು ಪ್ರಯತ್ನಪಟ್ಟರು. ಅದಲ್ಲದೆ ಆಧುನಿಕ ಮಾನವನ ಅನುಷ್ಠಾನ ಆವಶ್ಯಕತೆಗಳಿಗೆ ತಕ್ಕ ಧಾರ್ಮಿಕ ತತ್ತ್ವಗಳನ್ನು ಮತ್ತು ನಿಯಮಗಳನ್ನು ಅಳವಡಿಸಲು ಪ್ರಯತ್ನಪಟ್ಟರು. ಆದರೂ ಅವರು ವೇದಾಂತದ ಉದಾರ ಚೌಕಟ್ಟಿನೊಳಗೇ ಎಂದೂ ಇದ್ದರು. ಈ ಅಂಶವನ್ನು ಪ್ರಸ್ತುತ ಲೇಖನದಲ್ಲಿ ಎತ್ತಿತೋರಿಸಲು ಪ್ರಯತ್ನಿಸಲಾಗಿದೆ.

## ಸ್ವಾಮಿ ವಿವೇಕಾನಂದರ 'ಭಕ್ತಿ' ಯ ವ್ಯಾಖ್ಯಾನ


ತಮ್ಮ 'ಭಕ್ತಿಯೋಗ'ದ ಭಾಷಣಗಳಲ್ಲಿ ಸ್ವಾಮಿ ವಿವೇಕಾನಂದರು ಮೊದಲು ಭಕ್ತಿಯ ಸಾಂಪ್ರದಾಯಿಕ ವ್ಯಾಖ್ಯೆಗಳನ್ನು ಪರೀಕ್ಷೆ ಮಾಡಿ ನೋಡುತ್ತಾರೆ. ಅವುಗಳಲ್ಲಿ ನಾರದ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಪತಂಜಲಿ, ಭೋಜ, ವ್ಯಾಸ, ಶಾಂಡಿಲ್ಯ ಮತ್ತು ಸ್ವಪ್ನೇಶ್ವರರ ವ್ಯಾಖ್ಯಾನಗಳು ಸೇರಿವೆ. ಕೊನೆಗೆ, ಭಕ್ತಿಯ ಅತ್ಯುತ್ತಮ ವ್ಯಾಖ್ಯೆಯೆಂದು ಅವರು ಆಯ್ಕೆ ಮಾಡಿಕೊಂಡದ್ದು, ಪ್ರಹ್ಲಾದನ ಪ್ರಸಿದ್ಧವಾದ ಪ್ರಾರ್ಥನೆಯನ್ನು. ಅದು ಹೀಗಿದೆ:

**ಯಾ ಪ್ರೀತಿರವಿವೇಕಾನಾಂ ವಿಷಯೇಷು ಅನಪಾಯಿನೀ ।**
**ತ್ವಾಮ್ ಅನುಸ್ಮರತಃ ಸಾ ಮೇ ಹೃದಯಾತ್ ಮಾಪಸರ್ಪತು ॥**

"ಕ್ಷಣಭಂಗುರವಾದ ಇಂದ್ರಿಯ ವಿಷಯಗಳ ಮೇಲೆ ಅವಿವೇಕಿಗಳಿಗೆ ಎಂತಹ ಅಚಲವಾದ ಪ್ರೀತಿ ಇರುವುದೋ,

ಅಂತಹ ಪ್ರೀತಿಯು ನಿನ್ನನ್ನು ಸ್ಮರಿಸುವ ನನ್ನ ಹೃದಯದಿಂದ ಎಂದಿಗೂ ದೂರ ವಾಗದಿರಲಿ." (ಕೃತಿಶ್ರೇಣಿ, ೧: ೧೯೦)

ಮೇಲಿನ ವ್ಯಾಖ್ಯಾನದ ಆಧಾರದ ಮೇಲೆ, ಸ್ವಾಮಿ ವಿವೇಕಾನಂದರು, ವ್ಯಕ್ತಿಯೊಬ್ಬನ ಎಲ್ಲ ಜೀವಶಕ್ತಿಗಳು ಭಗವಂತನ ಕಡೆಗೆ ಹರಿಯುವುದೇ **'ಭಕ್ತಿ'** ಎಂದು ಪರಿಗಣಿಸುತ್ತಾರೆ. ಅವರ ಪ್ರಕಾರ ಭಗವದ್ಭಕ್ತಿ ಎಂದರೆ ನಮ್ಮೆಲ್ಲರಲ್ಲೂ ಇರುವ ಆಕರ್ಷಣೆಯೆಂಬ ಮೂಲಭೂತ ಭಾವನೆಯು ತನ್ನ ದಿಕ್ಕನ್ನು ಬದಲಿಸಿಕೊಂಡು ಭಗವಂತನೆಡೆಗೆ ಹರಿಯುವುದೇ ಆಗಿದೆ. ಗಿಡವೊಂದು ಸಹಜವಾಗಿಯೇ ಸೂರ್ಯನ ಬೆಳಕಿನ ದಿಕ್ಕಿನಲ್ಲಿ ಬೆಳೆಯುತ್ತದೆ. ಅದೇ ರೀತಿ, ಭಕ್ತಿಯು ಮಾನವ ಮನಸ್ಸು ಸಹಜವಾಗಿ, ತಾನೇ ತಾನಾಗಿ ಪರಮಾತ್ಮನೆಡೆಗೆ ಒಲಿಯುವ ಪ್ರಕ್ರಿಯೆಯಾಗಿದೆ. ಈ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ:




"ಭಕ್ತಿ ವಿಧ್ವಂಸಕಾರಿಯಲ್ಲ. ನಮ್ಮಲ್ಲಿರುವ ಯಾವ ಸ್ವಭಾವವೂ ನಿಷ್ಪ್ರಯೋಜಕವಲ್ಲ. ಅದರ ಮೂಲಕ ನಾವು ಸ್ವಾಭಾವಿಕವಾಗಿ ಮೋಕ್ಷವನ್ನು ಪಡೆಯಬೇಕು ಎಂದು ಅದು ಬೋಧಿಸುತ್ತದೆ. ಭಕ್ತಿಯು ನಮ್ಮ ಸ್ವಭಾವವನ್ನು ನಾಶಪಡಿಸುವುದಿಲ್ಲ. ಅದು ಪ್ರಕೃತಿಗೆ ವಿರೋಧವಾಗಿ ಹೋಗುವುದಿಲ್ಲ. ಆದರೆ ಅದಕ್ಕಿಂತಲೂ ಉತ್ತಮವಾದ, ಪ್ರಬಲವಾದ ದಾರಿಯನ್ನು ತೋರುವುದು. ಇಂದ್ರಿಯಕ್ಕೆ ಸಂಬಂಧಪಟ್ಟ ವಿಷಯವನ್ನು ನಾವು ಎಷ್ಟು ಸ್ವಾಭಾವಿಕವಾಗಿ ಪ್ರೀತಿಸುತ್ತೇವೆ! ಯಾವ ಪ್ರೀತಿಯನ್ನು ಮೊದಲು ವಿಷಯ ವಸ್ತುಗಳ ಮೇಲೆ ತೋರಿದ್ದೆವೋ ಅದೇ ಪ್ರೀತಿಯನ್ನು ದೇವರಿಗೆ ಕೊಟ್ಟರೆ, ಅದು ಭಕ್ತಿ ಎನಿಸುವುದು" (ಕೃತಿಶ್ರೇಣಿ, ೧: ೧೨೭).

ಬೇರೆ ಮಾತುಗಳಲ್ಲಿ ಹೇಳುವುದಾದರೆ, 'ಬದುಕುವ ಇಚ್ಛಾಶಕ್ತಿ'ಯನ್ನೇ ಭಗವಂತನೆಡೆಗೆ ತಿರುಗಿಸಿದಾಗ ಅದು 'ಭಕ್ತಿ' ಯಾಗುತ್ತದೆ. ಹೀಗೆ ಭಕ್ತಿ ಎನ್ನುವುದು ಮಾನವ ವ್ಯಕ್ತಿತ್ವವು ಪರತತ್ತ್ವ ವೆಂದು ಕರೆಯುವ ಭಗವತ್‌ತತ್ತ್ವದತ್ತ ತೋರುವ ಪರಿಪೂರ್ಣ ಪ್ರತಿಕ್ರಿಯೆಯಾಗಿದೆ. ಸಂಪೂರ್ಣವಾಗಿ ಇದೊಂದು ಸಕಾರಾತ್ಮಕ ಚಲನೆಯಾದ್ದರಿಂದ, ಇದರಲ್ಲಿ ದ್ವೇಷಕ್ಕಾಗಲಿ, ಭಯಕ್ಕಾಗಲಿ ಅವಕಾಶವಿರುವುದಿಲ್ಲ. ಹೀಗೆ ಇದು ಸೆಮೆಟಿಕ್ ಧರ್ಮಗಳಲ್ಲಿ (ಯಹೂದಿ ಧರ್ಮ, ಕ್ರೈಸ್ತ ಧರ್ಮ, ಇಸ್ಲಾಂ ಧರ್ಮ ಮುಂತಾದವು) ಕಂಡುಬರುವ ಪಾಪಪ್ರಜ್ಞೆ ಮತ್ತು ಭಗವಂತನ ವಿಷಯದಲ್ಲಿ ಭಯವೇ ಆಧಾರವಾಗಿರುವ ಭಗವತ್‌ಪ್ರೇಮದ ಕಲ್ಪನೆಗಿಂತ ವಿಭಿನ್ನವಾಗಿದೆ. ಕ್ರೈಸ್ತ ಧರ್ಮದಿಂದ ಹಿಂದೂಧರ್ಮಕ್ಕೆ ಭಕ್ತಿತತ್ತ್ವದ ಪರಿಚಯ ಉಂಟಾಯಿತು ಎನ್ನುವ ಪೌರ್ವಾತ್ಯಶಾಸ್ತ್ರಜ್ಞರಾದ ಕೆಲವು ವಿದ್ವಾಂಸರ ವಾದವನ್ನು ತಳ್ಳಿಹಾಕುತ್ತ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಭಾರತದ 'ಭಕ್ತಿ' ಎಂಬುದು ಪಾಶ್ಚಾತ್ಯ ದೇಶಗಳ 'ಭಕ್ತಿ'ಯ ಹಾಗಲ್ಲ. ನಮ್ಮ ಕೇಂದ್ರಭಾವನೆಯೆಂದರೆ ಭಯದ ಕಲ್ಪನೆಯಿಂದ ಮುಕ್ತವಾಗಿರುವುದು. ಯಾವಾಗಲೂ ಭಗವಂತನ ಮೇಲಿನ ಪ್ರೇಮದಿಂದ ಕೂಡಿರುವುದು. ಭಯದಿಂದ ಆರಾಧನೆಯಾಗದು. ಅದು ಯಾವತ್ತೂ ಸಾಧ್ಯವಾಗುವುದು ಕೇವಲ ಪ್ರೀತಿಯಿಂದ ಮಾತ್ರ. ಆರಂಭದಿಂದ ಅಂತ್ಯದವರೆಗೂ ಹೀಗೆಯೇ." (ಕೃತಿಶ್ರೇಣಿ, ೩: ೪೫೪)

ಭಕ್ತಿಯೆಂಬುದು ಬರಿಯ ಭಾವನೆಯೇ? ಬಹುತೇಕ ಪ್ರಸಿದ್ಧವಾದ ತಪ್ಪು ತಿಳಿವಳಿಕೆಯೆಂದರೆ ಭಕ್ತಿಯು ಒಂದು ಬಗೆಯ ಭಾವನೆ ಎಂದು. ಆದರೆ ಸ್ವಾಮಿ ವಿವೇಕಾನಂದರ ಪ್ರಕಾರ ಭಕ್ತಿಯು, ಮಾನವನಲ್ಲಿ ನಿಸ್ಸಂದಿಗ್ಧವಾಗಿ ಮನೆಮಾಡಿರುವ, ಪ್ರಜ್ಞೆಯ ಉನ್ನತ ಆಯಾಮಗಳನ್ನು ಏರಿಹೋಗುವ ಮತ್ತು ಆನಂದದ ಶ್ರೇಷ್ಠಸ್ವರೂಪಗಳನ್ನು ತಲುಪುವ ಅತೀಂದ್ರಿಯಾಕಾಂಕ್ಷೆ ಯಲ್ಲದೆ ಮತ್ತೇನಲ್ಲ. ಮಾನವನ ಮಾನಸಿಕ ವಿಕಾಸದ ಹಿಂದೆ ಇರುವ ಪ್ರೇರಣಾಶಕ್ತಿಯೇ ಇದಾಗಿದೆ. ಕೆಳಗಿನ ಹಂತದ ಪ್ರೇರಣೆಯಾಗಿ ಇದು ಭಾವನೆಗಳು ಮತ್ತು ಸ್ವಾಭಾವಿಕ ಲಕ್ಷಣಗಳಲ್ಲಿ ತಾದಾತ್ಮ್ಯಗೊಂಡಿರಬಹುದು. ಆದರೆ ಉನ್ನತ ಹಂತಗಳಲ್ಲಿ ಇದು ದಿವ್ಯತೆಯ ಆರಾಧನಾ ಪೀಠದಲ್ಲಿ ಯಾವತ್ತೂ ಪ್ರಜ್ವಲಿಸುತ್ತಿರುವ ಆತ್ಮದೀಪದ ರೂಪದಲ್ಲಿ ಬೆಳಗುತ್ತಿರುತ್ತದೆ. ಸ್ವಾಮಿ ವಿವೇಕಾನಂದರು ಇದನ್ನು ಹೀಗೆ ವಿವರಿಸುತ್ತಾರೆ:

**"....ಎಲ್ಲಿ ಸ್ವಾರ್ಥದ ಸುಳಿವು ಸ್ವಲ್ಪವೂ ಇಲ್ಲವೋ ಅದೊಂದೇ ಪ್ರೀತಿ. ಅದೇ ದೇವರ ಮೇಲಿರುವ ಪ್ರೀತಿ. ಇದನ್ನು ಪಡೆಯುವುದು ಬಹಳ ಕಷ್ಟ. ಮಕ್ಕಳು, ತಂದೆ, ತಾಯಿ ಮುಂತಾದ ಹಲವು ಪ್ರಕಾರದ ಪ್ರೀತಿಗಳ ಮೂಲಕ ಸಾಗಿ ಹೋಗುತ್ತಿರುವೆವು. ಆದರೆ ಬಹುತೇಕ ಸಂದರ್ಭಗಳಲ್ಲಿ ನಾವು ಏನನ್ನೂ ಕಲಿತುಕೊಳ್ಳುವುದಿಲ್ಲ. ನಾವು ಯಾವುದಾದರೂ ಒಂದು ಸ್ಥಳಕ್ಕೆ ಅಥವಾ ವ್ಯಕ್ತಿಗೆ ಅಂಟಿಕೊಂಡುಬಿಡುವೆವು. ಕೆಲವು ಸಮಯದಲ್ಲಿ ಮಾನವನು ಈ ಬಂಧನದಿಂದ ಹೊರಕ್ಕೆ ಬರುವನು...... ಮನುಷ್ಯನ ಪ್ರೀತಿಗೆ ಪಾತ್ರವಾದ ವಸ್ತು ಪ್ರತಿಕ್ಷಣವೂ ಸಾಯುತ್ತಿರುವಾಗ, ಅವನು ಬೆಳೆದಂತೆಲ್ಲಾ ಅವನ ಮನಸ್ಸು ಕೂಡ ನಿರಂತರವಾಗಿ ಬದಲಾಗುತ್ತಿರುವುದು. ಹೀಗಿರುವಾಗ ಯಾವ ರೀತಿಯ ಶಾಶ್ವತವಾದ ಪ್ರೀತಿಯನ್ನು ತಾನೆ ಕಾಣಬಲ್ಲಿರಿ?! ಭಗವಂತನಲ್ಲಿ ಅಲ್ಲದೆ ಮತ್ತೆಲ್ಲಿಯೂ ನೈಜ ಪ್ರೀತಿ ಇಲ್ಲವೇ ಇಲ್ಲ. ಹಾಗಾದರೆ ಉಳಿದ ಪ್ರೇಮಗಳೆಲ್ಲ ಏತಕ್ಕಾಗಿ? ಇವುಗಳೆಲ್ಲ ಅದರ ವಿವಿಧ ಘಟ್ಟಗಳು ಮಾತ್ರ ನಮ್ಮನ್ನು ಸದಾ ಮುಂದುವರಿಯುವಂತೆ ಪ್ರೇರೇಪಿಸುತ್ತಿರುವ ಯಾವುದೋ ಒಂದು ಶಕ್ತಿ ಇದೆ. ನಿಜವಾದ ವಸ್ತುವನ್ನು ಎಲ್ಲಿ ಹುಡುಕಬೇಕೋ ನಮಗದು ತಿಳಿಯದು. ಅದನ್ನು ಅನ್ವೇಷಿಸುವಂತೆ ಈ ಪ್ರೇಮವು ನಮ್ಮನ್ನು ಯಾವಾಗಲೂ ಮುಂದೆ ಮುಂದೆ ದೂಡುತ್ತಿದೆ."** (*ಕೃತಿಶ್ರೇಣಿ,* ೧:೧೩೯).

ಹೀಗೆ ನೈಜ ಭಕ್ತಿಯೆಂದರೆ, ಪರಿಪೂರ್ಣತೆಯನ್ನು ದರ್ಶಿಸಲು ಮಾನವನಲ್ಲಿ ಉಂಟಾಗುವ ತಡೆಯಲಾಗದ ಉನ್ನತ ಮಟ್ಟದ ಅತೀಂದ್ರಿಯಾಕಾಂಕ್ಷೆ. ಈ ಉನ್ನತ ಹಂತವನ್ನು **ಪರಾಭಕ್ತಿ** ಅಥವಾ **ಮುಖ್ಯಭಕ್ತಿ** ಎಂದು ಕರೆಯುತ್ತಾರೆ. ಈ ಹಂತವನ್ನು ತಲುಪಿದಾಗ, ಪ್ರೇಮವು ಬರಿಯ ಭಾವನೆಯಾಗಿ ಉಳಿಯುವುದಿಲ್ಲ. ಅದು ಅನಂತವೂ ಸರ್ವವ್ಯಾಪಕವೂ ಅತೀಂದ್ರಿಯವೂ ಆದ ಪರಮಾತ್ಮತತ್ತ್ವದೊಡನೆ ಐಕ್ಯವಾಗಲು ಹವಣಿಸುತ್ತಿರುವ ಜೀವಾತ್ಮನ ಜ್ಯೋತಿಯಾಗಿ ಪರಿಣಮಿಸುತ್ತದೆ. ಅಂತರಂಗದ ಈ ಬೆಳಕು ಪ್ರಕಟವಾಗಲು ಆರಂಭಗೊಂಡಾಗ ಮಾತ್ರವೇ ನೈಜ ಭಕ್ತಿಯ ಅವತರಣವಾಗುವುದು.

ಈ ಬಗೆಯ ಪರಾಭಕ್ತಿಯ ಅನಾವರಣಕ್ಕೆ ಅವಶ್ಯವಾಗಿ ಬೇಕಾಗಿರುವ ಪೂರ್ವಸಿದ್ಧತೆಯೆಂದರೆ ತನ್ನಂತರಂಗದಲ್ಲಿರುವ ಪ್ರತ್ಯಗಾತ್ಮನ ಅರಿವು. ಈ ಬಗೆಯ ಸ್ವಾನುಭವವನ್ನು ಶ್ರೀರಾಮಾನುಜಾಚಾರ್ಯರು ಮತ್ತು ಅವರ ಅನುಯಾಯಿಗಳು **ಆತ್ಮಾವಲೋಕನ** ಎಂದು ಕರೆಯುತ್ತಾರೆ. ಇವರ ತಾತ್ತ್ವಿಕ ಶಾಖೆಯ ಪ್ರಕಾರ, ಸ್ವಪ್ರಜ್ಞೆಯ ಸಾಕ್ಷಾತ್ಕಾರವೇ ಮೊದಲು ಬರುತ್ತದೆ. ಅನಂತರವೇ ಭಗವಂತನ ಸಾಕ್ಷಾತ್ಕಾರವು ಸಾಧ್ಯ. ಆದ್ದರಿಂದ ರಾಮಾನುಜ ಮತವು ಭಕ್ತಿಯೋಗದ ಸಾಧನೆಗಿಂತ ಮೊದಲು ಕರ್ಮಯೋಗ ಮತ್ತು ಜ್ಞಾನಯೋಗಗಳ ಸಾಧನೆಗೆ ಮಹತ್ವ ನೀಡುತ್ತದೆ.

ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಭಗವಂತನ ಮೇಲಿನ ನೈಜ ಭಕ್ತಿಯನ್ನು 'ನೀಡುವಿಕೆ' (charity) ಎಂದು ಹೆಸರಿಸಲಾಗಿದೆ. ಹದಿನೇಳನೇ ಶತಮಾನದಲ್ಲಿ ಆಗಿಹೋದ ಸ್ಪೇನ್ ದೇಶದ ಅತ್ಯಂತ ಶ್ರೇಷ್ಠ ಅನುಭಾವಿ ಸಂತಳಾದ ಥೆರೆಸಾ ಇದನ್ನು ಹೀಗೆ ಬಣ್ಣಿಸುತ್ತಾಳೆ: " 'ನೀಡುವಿಕೆ' ಯ (charity) ಎರಡನೆಯ ವಿಶಿಷ್ಟ ಗುರುತೆಂದರೆ, ಪ್ರೇಮದ ಕೆಳಗಿನ ಹಂತದ ರೂಪಗಳಂತೆ, ಇದು ಬರಿಯ ಭಾವನೆಯಲ್ಲ. ಇದು ಇಚ್ಛಾಶಕ್ತಿಯ ಕ್ರಿಯೆಯಾಗಿ ಆರಂಭಗೊಂಡು, ಪರಿಶುದ್ಧ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಸುಸಂಪನ್ನಗೊಳ್ಳುತ್ತದೆ. ಅನುಭೂತಿಯಿಂದ ಒಡಮೂಡಿದ ಪ್ರೇಮ-ಜ್ಞಾನದ ಗಳಿಕೆಯೇ ಇದರ ಉದ್ದೇಶವಾಗಿದೆ."

ಭಕ್ತಿಯೆಂಬುದು ಒಂದು ಬಗೆಯ ಭಾವನೆಯೆಂದು ಜನರು ಹೇಳುವಾಗ, ಅದು ಕೆಳಮಟ್ಟದ, ಅಂದರೆ **ಗೌಣೀ** ಅಥವಾ **ವೈಧೀ** ಭಕ್ತಿಯೆಂದು ತಿಳಿದುಕೊಳ್ಳಬೇಕು. ಈ ಅವಧಿಯಲ್ಲಿ, ಪುರಾಣ-ಪುಣ್ಯಕಥೆಗಳು, ಆಚರಣೆಗಳು, ನಿಯಮಗಳು ಮತ್ತು ಪ್ರತೀಕಗಳು ಭಕ್ತನ ಜೀವಿತದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅಧ್ಯಾತ್ಮ ಪಿಪಾಸುವು ಇವುಗಳೆಲ್ಲದರ ಸಹಾಯವನ್ನು ಪಡೆಯಬಹುದು. ಆದರೆ, ಸ್ವಾಮಿ ವಿವೇಕಾನಂದರು ಹೀಗೆ ಎಚ್ಚರಿಕೆ ಕೊಡುತ್ತಾರೆ: "ನಾವು ಒಂದು ಸಂಗತಿಯನ್ನು ಯಾವಾಗಲೂ ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. ದೇವತಾರೂಪಗಳು, ಆಚರಣೆಗಳು (ಆಧ್ಯಾತ್ಮಿಕವಾಗಿ) ಅಭಿವೃದ್ಧಿಹೊಂದುತ್ತಿರುವ ಜೀವಿಗೆ ಅತ್ಯಂತ ಅವಶ್ಯಕವಾದುವು ಎನ್ನುವುದೇನೋ ಸರಿಯೆ. ಆದರೆ ಅವು ಭಗವಂತನಲ್ಲಿ ಅತ್ಯಂತ ಉತ್ಕಟ ಪ್ರೇಮವನ್ನು ಪರಿಭಾವಿಸುವ ಸ್ಥಿತಿಗೆ ನಮ್ಮನ್ನು ಕರೆದುಕೊಂಡು ಹೋಗುವುದಕ್ಕಿಂತ ಬೇರೆ ಯಾವ ಮೌಲ್ಯವನ್ನೂ ಹೊಂದಿಲ್ಲವೆಂಬುದೂ ಅಷ್ಟೇ ಸತ್ಯ" (*ಕೃತಿಶ್ರೇಣಿ,* ೧: ೧೮೮).

ಬಹುತೇಕ ಧಾರ್ಮಿಕ ವ್ಯಕ್ತಿಗಳು ಈ ಕೆಳಗಿನ ಹಂತದಲ್ಲಿಯೇ ಉಳಿದುಬಿಡುತ್ತಾರೆ. ಭಗವಂತನ ಮೇಲೆ ಅವರಿಗೆ ಇರುವುದು ಅಲ್ಪಸ್ವಲ್ಪ ಭಕ್ತಿ ಮಾತ್ರ. ಅದಕ್ಕೆ ಅವರು ತಮ್ಮ ವೈಯಕ್ತಿಕ ಬೇಕುಬೇಡಗಳನ್ನು, ತಮ್ಮ ಪಂಗಡದ ಪೂರ್ವಗ್ರಹಗಳನ್ನು ಅಗಾಧ ಪ್ರಮಾಣದಲ್ಲಿ ಕೆಲವೊಮ್ಮೆ ಸೇರಿಸಿಬಿಡುತ್ತಾರೆ! ಆ ಮೂಲಕ ತಾವು ರಕ್ಷಿಸುತ್ತಿದ್ದೇವೆಯೆಂದು ಭಾವಿಸುವ ತಮ್ಮ ಸ್ವಂತ ಧರ್ಮಕ್ಕೇ ಕಳಂಕವನ್ನು ತರುತ್ತಾರೆ! ಇದಕ್ಕೆಂದೇ ಸ್ವಾಮಿ ವಿವೇಕಾನಂದರು ಹೀಗೆ ನುಡಿಯುತ್ತಾರೆ: "ಹಿಂದೂ, ಕ್ರೈಸ್ತ, ಮಹಮ್ಮದೀಯ ಧರ್ಮಗಳ ಮತಾಂಧರು, ಭಕ್ತಿಯ ಕೆಳಗಿನ ಹಂತದಲ್ಲಿರುವ ಆರಾಧಕರಿಂದಲೇ, ಬಹುತೇಕ ಯಾವಾಗಲೂ ನೇಮಕಗೊಂಡವರಾಗಿದ್ದಾರೆ" (*ಕೃತಿಶ್ರೇಣಿ,* ೧: ೧೮೭)

ಭಗವತ್ಪ್ರೇಮವು ಬೆಳೆದು, ಪರಾಭಕ್ತಿಯ ಸ್ವರೂಪವನ್ನು ಪಡೆದುಕೊಂಡಾಗ, "ರೂಪಗಳು ನಶಿಸಿಹೋಗುವವು, ಆಚರಣೆಗಳು ಹಾರಿ ಹೋಗುವವು, ಗ್ರಂಥಗಳನ್ನು (ಭಕ್ತನು) ಮೀರಿಹೋಗುವನು; ವಿಗ್ರಹಗಳು, ದೇವಸ್ಥಾನಗಳು, ಚರ್ಚುಗಳು, ಧರ್ಮಗಳು ಮತ್ತು ಮತಗಳು, ದೇಶಗಳು ಮತ್ತು ಜನಾಂಗಗಳು – ಈ ಎಲ್ಲ ಸಣ್ಣಪುಟ್ಟ ಸೀಮಿತ ಸಂಗತಿಗಳು ಮತ್ತು ಬಂಧನಗಳು ತಾವೇ ತಾವಾಗಿ ಬಿದ್ದುಹೋಗುವವು.